೫)	ವರ್ಗ	ಸಂಖ್ಯೆ	ಅಂದಾಜು (ತಾತ್ಕಾಲಿಕ) (೧ ಮನೆಗೆ)
	ಮಧ್ಯಮ ವರ್ಗ ಗ್ರೂಪ್ ೧	೪೨	ರೂ ೪೯, ೪೫೦
	ಮಧ್ಯಮ ವರ್ಗ ಗ್ರೂಪ್ ೨	೧೯	ರೂ ೬೬,೩೦೦
	ಅಲ್ಪ ಆದಾಯ ವರ್ಗ	೪೪	ರೂ ೩೪,೬೫೦
	ಆರ್ಥಿಕ ಹಿಂದುಳಿದ ವರ್ಗ	೪೧	ರೂ ೨೩,೭೦೦

ಈ) ಡಿಸೆಂಬರ್ ೧೯೮೭ರ ಒಳಗೆ ಪೂರ್ತಿಗೊಳಿಸಲಾಗುವುದು.

ಶ್ರೀ ಡಿ. ಟಿ. ಜಯಂಕುಮಾರ್.— ಮಾನ್ಯ ಅಧ್ಯಕ್ಷರೇ, ಮನೆಗಳನ್ನು ಕೆ.ಹೆಚ್.ಬಿ. ಪತಿಯಿಂದ ಕಟ್ಟಿಸಿದ್ದಾರೆ. ಆದರೆ ಆ ಮನೆಗಳಲ್ಲಿ ವಾಸ ಮಾಡುವುದಕ್ಕೆ ಬಹಳ ಜನರು ಹಿಂದುಮುಂದು ನೋಡುತ್ತಿದ್ದಾರೆ. ಈ ಕಟ್ಟಡಗಳ ಗುಣಮಟ್ಟ ಸರಿಯಾಗಿರುವುದಿಲ್ಲ. ಮಾನ್ಯ ನಜೀರ್‌ಸಾಬ್‌ರವರು ಒಳ್ಳೆಯ ಹೆಸರನ್ನು ಗಳಿಸಿದ್ದಾರೆ, ಇವರು ಕೆ. ಹೆಚ್. ಬಿ. ಪತಿಯಿಂದ ಕಟ್ಟುವ ಕಟ್ಟಡಗಳ ಗುಣಮಟ್ಟವನ್ನು ಹೆಚ್ಚಿಸಲಿಕ್ಕೆ ಪ್ರಯತ್ನ ಮಾಡಬೇಕು. ಹಾಗೂ ಇವರ ಇಲಾಖೆಯಲ್ಲಿ ಇರುವ ಲ್ಯಾಂಡ್ ಆರ್ಮಿಗೆ ಕಟ್ಟಡಗಳನ್ನು ಕಟ್ಟುವುದಕ್ಕೆ ಏರ್ಪಾಡು ಮಾಡಿದರೆ ಒಳ್ಳೆಯದಾಗುತ್ತದೆ ದಯವಿಟ್ಟು, ಗುಣಮಟ್ಟ ಕಾಪಾಡಲಿಕ್ಕೆ ಹೆಚ್ಚು ಅಧ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಧ್ಯಮ ವರ್ಗ ೧, ಮಧ್ಯಮ ವರ್ಗ ೨, ಅಲ್ಪ ಆದಾಯ ವರ್ಗ, ಆರ್ಥಿಕ ಹಿಂದುಳಿದ ವರ್ಗ ಎಂದು ನಾಲು ಡಿವಿಷನ್ ಗಳಾಗಿ ಮಾಡಿ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೀರಿ. ಆದೇ ರೀತಿ ಹೆಚ್ಚು ಆದಾಯ ಇರತಕ್ಕಂಥ ಜನರಿಗೂ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಅವಕಾಶ ಕೊಟ್ಟರೆ, ಸಾಕಷ್ಟು ಬೇಡಿಕೆ ಇದಕ್ಕೆ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ಹೆಚ್ಚು ಆದಾಯದ ವರ್ಗಕ್ಕೆ ಮನೆಗಳನ್ನು ಕಟ್ಟುವಾಗ ಗುಣಮಟ್ಟ ಕಾಪಾಡುವುದಕ್ಕೆ ಹೆಚ್ಚು ಮುತುವರ್ಜಿ ವಹಿಸಬೇಕೆಂದು ಹೇಳುತ್ತೇನೆ,

ಶ್ರೀ ಅಬ್ದುಲ್ ನಜೀರ್‌ಸಾಬ್.—ಗುಣಮಟ್ಟ ಕಾಪಾಡುವ ಕೆಲಸವನ್ನು ಸಾಧ್ಯವಾದಷ್ಟು ಮಟ್ಟಿಗೆ ಕೈಗೊಳ್ಳುತ್ತೇನೆ. ಮಾನ್ಯ ಸಾರ್ವಜನಿಕರಾಗಲೀ, ಮಾನ್ಯ ಸದಸ್ಯರಾಗಲೀ ಎಸ್ಟಿಯಾದರೂ ಕಟ್ಟಡಗಳ ಗುಣಮಟ್ಟದ ಬಗ್ಗೆ ದೂರು ಕೊಟ್ಟಲ್ಲಿ ಕ್ರಮ ಕೈಗೊಳ್ಳುತ್ತೇನೆ. ಈಗಾಗಲೇ ಸರ್ಕಾರವು ಒಂದು ಆಜ್ಞೆಯನ್ನು ಮಾಡಿ ಶೇಕಡಾ ೧೦ ಪರ್‌ಸೆಂಟ್‌ನಷ್ಟು ಮನೆಗಳನ್ನು ಕಟ್ಟುವ ಕೆಲಸವನ್ನು ಲ್ಯಾಂಡ್ ಆರ್ಮಿಗೆ ಕೊಡಬೇಕೆಂದು ಆಜ್ಞೆ ಮಾಡಿದ್ದೇವೆ.ಹೆಚ್ಚು ಆದಾಯ ಉಳ್ಳವರಿಗೂ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿದ್ದಾರೆ. ಈಗ ಮಧ್ಯಮ ವರ್ಗದ ಜನಗಳಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮನೆಗಳನ್ನು ಇ.ಡಬ್ಲು.ಎಸ್ (ಎಕನಾಮಿಕಲಿ ವೀಕರ್ ಸೆಕ್ಷನ್) ಸ್ಕೀಮ್‌ನಲ್ಲಿ ಕಟ್ಟಿಸಿ ಕೊಡುತ್ತಿದ್ದೇವೆ. ಹೆಚ್ಚು ಆದಾಯ ಉಳ್ಳವರಿಗೆ ಮನೆಗಳನ್ನು ಕಟ್ಟುವ ಬಗ್ಗೆ ಅಗತ್ಯ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಕರ್ನಾಟಕ ಗೃಹ ಮಂಡಲಿಯಂ ಮನೆಗಳ ಹಂಚಿಕೆ ಬಗ್ಗೆ

೭೫೮. ಶ್ರೀ ಎಸ್. ಡಿ. ಜಯರಾಮ್ (ವಂಡ್ಯ).—ಮಾನ್ಯ ಗ್ರಾಮಾಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಗೃಹ ಮಂಡಳಿಯವರು ೧೯೮೪-೮೫ನೇ ಹಾಗೂ ೮೬ರವರೆಗೆ ಹಂಚಿದ ಮನೆಗಳ ಸಂಖ್ಯೆ ಎಷ್ಟು ?

ಅ) ಯಾವ ಆಧಾರ ಮಂತ್ರ ಅರ್ಹತೆಗಳನ್ನು ಅನುಸರಿಸಿ ಅವುಗಳನ್ನು ನೀಡಲಾಗಿದೆ ?

ಇ) ಕೊಟ್ಟಿರುವ ನಿವೇಶನ ಹಾಗೂ ಮನೆಗಳಲ್ಲಿ ಬಿಡಿ ನಿವೇಶನ ಮಂತ್ರ ಮನೆಗಳು ಎಷ್ಟು ? ಹಾಗೂ ಇತರೆ ಎಷ್ಟು ! (ಜಿಲ್ಲಾವಾರು) ಮಾಹಿತಿ ನೀಡುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ)

ಇಡಬ್ಲ್ಯೂಎಸ್	ಎಲ್‌ಐಜಿ	ಎಂಐಜಿ	ಹೆಚ್‌ಐಜಿ
೧೯೮೬.. ೬೫೫ ೧೪೮೪	೧೨೪೮	೧೧೪೪	೨೧೬
೧೯೮೫,—೮೬. ೪೪೧	೬೮೯	೫೦೮	೪೪

ಆ) ಹಂಚಿಕೆ ನಿಯಮಾವಳಿ ೧೯೮೫ ಮತ್ತು ೧೯೮೪ರ ಪ್ರಕಾರ

ಇ) ವಿವರದ ಪಟ್ಟಿಯನ್ನು ಲಗತ್ತಿಸಲಾಗಿದೆ.

ಜಿಲ್ಲಾವಾರು ಹಂಚಿಕೆ ಬಿಡಿ ಮನೆಗಳು ನಿವೇಶನಗಳ ಹಂಚಿಕೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	೧೯೪೪-೪೫				ಹಂಚಿಕೆಯಾದ ಮನೆಗಳ ಸಂಖ್ಯೆ			೧೯೪೫-೪೬		
		ಬಿಡಿ ಮನೆಗಳು	ನಿವೇಶನಗಳು	ಒಟ್ಟು	ಬಿಡಿ ಮನೆಗಳು	ನಿವೇಶನಗಳು	ಒಟ್ಟು	ಬಿಡಿ ಮನೆಗಳು	ನಿವೇಶನಗಳು	ಒಟ್ಟು
೧	೨	೩	೪	೫	೬	೭	೮	೯	೧೦	೧೧	೧೨
೧	ಬೆಂಗಳೂರು	೬	೦	೬	೧೦	—	೧೦	೨೯	೨೮	೨೮	೧೦
೨	ಮೈಸೂರು	೪೦	೧೦	೫೦	—	—	—	೩	೧೫	೩	—
೩	ಮಂಡ್ಯ	೧೦	—	೫	—	—	—	—	೦	—	—
೪	ಧಾರವಾಡ	೨	೫	೦೦	—	—	—	೩	೫	೦	—
೫	ಶಿವಮೊಗ್ಗ	೧೬	೬	—	—	—	—	೩	೧೬	೩	—
೬	ಗುಲ್ಬರ್ಗ	೦	೩೩	೬	—	—	—	—	೨	೭	—
೭	ಹಾಸನ	—	೩	೧೬	—	—	—	೧೦	೨೫	೪	೨೩ (ನಿವೇಶನಗಳು)
೮	ಚಿಕ್ಕಮಂಗಳೂರು	—	೫	೫	—	—	—	೦	೬	—	—
೯	ಕೊಡಗು	—	—	—	—	—	—	೦	೦	—	—
೧೦	ಬಿಜಾಪುರ	೨	೦	೬	—	—	—	೨	೦೨	೬	—
೧೧	ಮಂಗಳೂರು	—	೬	೫	—	—	—	—	೪	—	—
೧೨	ಉತ್ತರ ಕನ್ನಡ	—	—	—	—	—	—	—	—	—	—
೧೩	ಬೀದರ್	—	೧೫	೧೫	—	—	—	—	—	—	—
೧೪	ಬಳ್ಳಾರಿ	೬	೫	೧೫	—	—	—	೦	೧೦	—	—
೧೫	ರಾಯಚೂರು	೫	೩೦	೦೦	—	—	—	೫	—	—	—
೧೬	ಚಿತ್ರದುರ್ಗ	—	೫	೫	—	—	—	—	೬	—	—
೧೭	ಬೆಳಗಾಂ	—	೬	೨	೧	—	—	೨	೧	೦	—
೧೮	ಕೋಲಾರ	೦೦	೦೦	೦	—	—	—	—	೧	—	—
೧೯	ತುಮಕೂರು	—	—	—	—	—	—	—	—	—	—

ಗಣಿಗಾರಿಕೆ ಮತ್ತು ಗಣಿಗಾರಿಕೆ-ಆಧಾರಿತ ಸಾಲಿನಲ್ಲಿ ಹಂಚಿಕೆಯಾದ ಮನೆಗಳ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಗಣಿಗಾರಿಕೆ			ಹಂಚಿಕೆಯಾದ ಮನೆಗಳ ಸಂಖ್ಯೆ				ಗಣಿಗಾರಿಕೆ		
		ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು ಜನಾಂಗ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು ಜನಾಂಗ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಒಟ್ಟು
೧	೨	೩	೪	೫	೬	೭	೮	೯	೧೦	೧೧	೧೨
೧	ಬೆಂಗಳೂರು	೫೧೯	೬	೩೦	೬೧	—	೪೧	೨೯೦	೨೩೩	೩೧	—
೨	ಚಿಕ್ಕಮಗಳೂರು	೨೪೯	೧೮೯	೪೪	—	—	೪೨	೪೧	೧೩	—	—
೩	ಮಂಡ್ಯ	೧೪೪	೧೦೩	೪೧	—	—	೧೯	೧	—	—	—
೪	ಧಾರವಾಡ	೨೧೪	೩೯೯	೪೧೧	—	—	೧೦	೨೭	೨೧	—	—
೫	ಶಿವಮೊಗ್ಗ	೧೭೪	೨೦೪೪	೧೨೨	—	—	೨೭	೧೭	೪	—	—
೬	ಗುಲ್ಬರ್ಗ	೧	೪೧	೨೨	—	—	೪೬	೨೨	೦೧೧	—	—
೭	ಹಾಸನ	೧೧	೨೨	೫೪	—	—	೩೯	೩೧	೧೭	೨೩	—
೮	ಚಿಕ್ಕಮಗಳೂರು	—	೫	೫	—	—	೧೧	೭	೧೧	—	—
೯	ಕೊಡಗು	—	—	—	—	—	೦	೦	೨	—	—
೧೦	ಬಿಜಾಪುರ	೨	೧೪	೧೩	—	—	೨	೨೧	೨೭	—	—
೧೧	ಮಂಗಳೂರು	೫೪	೫೩	೬೯	—	—	೬	೭೭	೩೪	—	—
೧೨	ಉತ್ತರ ಕನ್ನಡ	—	೪	೫	—	—	—	೫	೩೦	—	—
೧೩	ಬೀದರ್	—	೧೨	೧೩	—	=	೬	—	೨	—	—
೧೪	ಬಳ್ಳಾರಿ	೬	೪೪	೨೩	—	—	೧೩೪	೧೮೮	೧೨	—	—
೧೫	ರಾಯಚೂರು	೫	೩೧	೧೦	—	—	೩	—	೫	—	—
೧೬	ಚಿತ್ರದುರ್ಗ	೮	೨೧	೨೭	—	—	—	೫	೨	—	—
೧೭	ಬೆಳಗಾಂ	—	೭	೨	—	—	೪೨	೨೪	೪೬	—	—
೧೮	ಕೋಲಾರ	೧೪	೨೮	೫	—	—	—	೨	೨	—	—
೧೯	ತುಮಕೂರು	೧೦	೧೦	೧೪	—	—	೦	—	—	—	—

೧೯೮೨-೮೩ ನುತ್ತ ೧೯೮೩-೮೬ನೇ ಸಾಲಿನಲ್ಲಿ ಹಂಚಿಕೆಯಾದ ಬಿಡಿ ನಮೆಶಷಗಳ ಪಟ್ಟಿ

೧	೨	೩	೪	೫	೬	೭	೮	೯	೧೦	೧೧	೧೨
೧	ಯಲಹಂಕ ಬೆಂಗಳೂರು	—	—	೧೭೨	೩೬	—	—	—	—	—	—
೨	ಹೊಸಕೆ	—	—	—	೩೭	—	—	—	...	—	—
೩	ಬೆಂಗಳೂರು	—	—	—	೧೦	—	—	—	—	—	—

ಅಧ್ಯಕ್ಷರು.—ಶ್ರೀ ಎಸ್.ಡಿ. ಜಯರಾಮ್‌ರವರು.....ಆಬ್ಸೆಂಟ್ ;

ಶ್ರೀ ವೆಂಕಟರಾಮಯ್ಯನವರು, ನಿಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ೧೯೮೫-೮೬, ೧೯೮೬-೮೭ನೇ ಸಾಲಿನಲ್ಲಿ ನಗರ ಪ್ರದೇಶಗಳಾದ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ, ವಿಜಯಪುರಗಳಲ್ಲಿ ವಸತಿ ಹೀನರಿಂದ ವಸತಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ ; ಇಷ್ಟೊಂದು ಮಾಹಿತಿಯನ್ನು ೧೫ ದಿವಸ ಎಂಟು ದಿನಗಳ ಒಳಗೆ ತರಿಸಿಕೊಳ್ಳುವುದು ಕಷ್ಟ ವಾಗುತ್ತದೆ. ಇದರ ಜೊತೆಗೆ ಇತರ ನಗರ ಪ್ರದೇಶಗಳಲ್ಲಿ ವಸತಿ ಹೀನರಿಂದ ಬಂದಿರುವ ಅರ್ಜಿಗಳ ಸಂಖ್ಯೆಯನ್ನು ಕೇಳಿದ್ದಾರೆ. ನಮ್ಮ ರಾಜ್ಯದಲ್ಲಿ ೧೭೧ ನಗರ ಪ್ರದೇಶಗಳು ಇವೆ. ಇವುಗಳ ಮಾಹಿತಿ ಯನ್ನು ಒಂದು ವಾರದಲ್ಲಿ ಹೇಗೆ ತರಿಸುವುದು ? ಮಾನ್ಯ ಅಧ್ಯಕ್ಷರೇ, ಇದನ್ನು ಅನ್‌ಸ್ಟಾರ್ಡ್ ಕ್ವೊಶ್ಚನ್ ಆಗಿ ಮಾಡಿದರೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಇದು ಸ್ಟಾರ್ಡ್ ಕ್ವೊಶ್ಚನ್ ಆಗಿಯೇ ಇರಲಿ.

ಅಧ್ಯಕ್ಷರು.—ಅನ್ ಸ್ಟಾರ್ಡ್ ಕ್ವೊಶ್ಚನ್ ಮಾಡಿದರೂ ಹಾಫ್ ಆನ್ ಹವರ್ ಡಿಸ್ಕಷನ್‌ಗೆ ಅವಕಾಶ ಇದೆ.

ಶ್ರೀ ಎಂ. ಪುಲ್ಲಿಕಾರ್ಜುನ ಖಿರ್ಗೆ.—ಅವಕಾಶ ಸಿಗುವುದೇ ಕಷ್ಟ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಒಂದು ಕೆಲಸ ಮಾಡಲಿ, ಕಾರ್ಪೊರೇಷನ್‌ಗಳ ವಿರಯಾಗಳ ಮಾಹಿತಿಯನ್ನೇ ಕೊಡಲಿ.

ಅಧ್ಯಕ್ಷರು.—ವೆಂಕಟರಾಮಯ್ಯನವರೇ ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ.

ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಪಡ್ಲಿಹಾಳ್ ಹಾಗೂ ಮಮ್ಮಾದಾಪುರ್ ಗ್ರಾಮಗಳಿಗೆ ಸಣ್ಣ ನೀರು ಸರಬರಾಜು ಯೋಜನೆ

೬೩೪ ಶ್ರೀ ವೀರ ಕಂಬಾರ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಪಡ್ಲಿಹಾಳ ಮತ್ತು ಮಮ್ಮದಾಪುರ ಗ್ರಾಮಗಳ ಕಿರು ನೀರು ಸರಬರಾಜು ಯೋಜನೆಗಳಿಗೆ ನಿಗದಿ ಮಾಡಿದ ಹಣವೆಷ್ಟು ?

ಆ) ಈ ಯೋಜನೆಗಳ ಕೆಲಸವನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಇಲ್ಲಿಯವರೆಗೆ ಮಾಡಿರುವ ಖರ್ಚೆಷ್ಟು ?

ಇ) ಕೆಲವು ಕಾಲದ ಹಿಂದೆ ಈ ಕೆಲಸಗಳನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಉ) ಕೆಲಸವನ್ನು ಶುರು ಮಾಡಿ ಬೇಗನೆ ಮುಗಿಸುವುದಕ್ಕೆ ಸರ್ಕಾರವು ಶೀಘ್ರ ಕ್ರಮವನ್ನು ತೆಗೆದುಕೊಳ್ಳಲಾಗುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ೧) ಪಡ್ಲಿಹಾಳ ಕಿರು ನೀರು ಸರಬರಾಜು ಯೋಜನೆಗೆ ರೂ. ೭೦,೮೦೦

೨) ಮಮ್ಮದಾಪುರ ಕಿರು ನೀರು ಸರಬರಾಜು ಯೋಜನೆಗೆ ರೂ. ೯೨,೧೦೦

ಆ)	ಯೋಜನೆ	ಪ್ರಾರಂಭಿಸಿದ ದಿನಾಂಕ	ಇದುವರೆಗೆ ಆಗಿರುವ ಖರ್ಚು
೧	ಪಡ್ಲಿಹಾಳ	೪-೧೨-೧೯೮೬	ರೂ. ೫೪,೪೪೭
೨	ಮಮ್ಮದಾಪುರ	ಸೆಪ್ಟೆಂಬರ್ ೧೯೮೬	ರೂ. ೪೬,೫೫೮